**ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ09.12.2025 ರಂದು ಪ್ರಮಾಣೀಕರಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆ ಜಿ ಪಿ ವಕೀಲರಿಂದಃ**

ನನ್ನ ತಂದೆ ಹೆಸರು ಯಾಲಕ್ಕಿಗೌಡ. ಅವರು ಈಗ ಮೃತಪಟ್ಟು 14-15 ವರ್ಷಗಳಾಗಿರುತ್ತವೆ. ನನ್ನ ತಂದೆಗೆ 5 ಜನ ಗಂಡು ಮಕ್ಕಳು ಮತ್ತು 4 ಜನ ಹೆಣ್ಣು ಮಕ್ಕಳು ಇರುತ್ತಾರೆ. ನಮ್ಮ ಕುಟುಂಬದಲ್ಲಿ ಈವರೆಗೂ ವಿಭಾಗವಾಗಿರುವುದಿಲ್ಲ. ನಮ್ಮ ತಂದೆ ಹೇಳಿದಂತೆ ಇಂತಿಷ್ಟು ಜಾಗವನ್ನು ಪ್ರತ್ಯೇಕವಾಗಿ ಅನುಭವಿಸಿಕೊಂಡು ಬರುತ್ತಿದ್ದೇವೆ. ನಾನು 8 ಎಕರೆ ಜಮೀನಿನ ಸ್ವಾಧೀನಾನುಭವದಲ್ಲಿ ಇರುತ್ತೇನೆ. ನನ್ನ ಸಹೋದರರು ಕೂಡಾ 6 ಎಕರೆ, 7 ಎಕರೆ ಗಳಷ್ಟು ಪ್ರತ್ಯೇಕ ಸ್ವಾಧೀನದಲ್ಲಿದ್ದಾರೆ. ನಮ್ಮ ಸಹೋದರಿಯರು ಇಲ್ಲಿಯವರೆಗೂ ತಮ್ಮ ಭಾಗವನ್ನು ಪಡೆದುಕೊಂಡಿಲ್ಲ. ನಿ ಪಿ 9 ರಿಂದ 14 ರ ಪಹಣಿ ಪತ್ರಿಕೆಗಳಲ್ಲಿ ಕಂಡುಬರುವ ಆಸ್ತಿಗಳು ನನ್ನ ತಂದೆ ಹೆಸರಿನಲ್ಲಿ ಇದೆ ಎಂದರೆ ಸರಿ. ಸಾಕ್ಷಿಯು ಮುಂದುವರಿದು ಕೆಲವೊಂದು ಪಹಣಿ ಪತ್ರಿಕೆಗಳಲ್ಲಿ ನನ್ನ ಅಣ್ಣನಾದ ವೆಂಕಟೇಶ ರವರ ಹೆಸರಿನಲ್ಲಿ ಖಾತೆ ಇದ್ದು ಆದರೆ ಅವರು 30 ವರ್ಷಗಳಿಂದ ಕಾಣೆಯಾಗಿರುತ್ತಾರೆ ಎಂದು ನುಡಿಯುತ್ತಾರೆ. ನಿ ಪಿ 9 ರಿಂದ 14 ರಂತೆ ನಾನು ಅಂದಾಜು 10 ½ ಎಕರೆಗಳಷ್ಟು ಜಮೀನಿನ ಪಹಣಿ ಪತ್ರಿಕೆಗಳನ್ನು ಹಾಜರು ಪಡಿಸಿರುತ್ತೇನೆ ಎಂದರೆ ಸರಿ. ಸದರಿ ಜಮೀನುಗಳನ್ನು ನಾನು ಅನುಭವದಲ್ಲಿದ್ದೇನೆ ಎಂದು ತೋರಿಸಲು ನಾನು ಯಾವುದೇ ಕಂದಾಯ ಪಾವತಿ ರಶೀದಿಗಳನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ. ಸದರಿ ಜಮೀನಿನಲ್ಲಿ ನಾನು ಭತ್ತ ಬೆಳೆಯುತ್ತೇನೆ. ಸದರಿ ಜಮೀನಿನಿಂದ ಬರುವ ಆದಾಯದಿಂದ ನನಗೆ ನನ್ನ ಸಂಸಾರದ ಜೀವನನಿರ್ವಹಣೆ ಮಾಡಲು ಮಾತ್ರ ಸಾಧ್ಯವಾಗುತ್ತಿತ್ತು ನಾನು ಹೇಳುವಂತೆ ಆರೋಪಿಗೆ ಸಾಲ ಕೊಡುವಷ್ಟು ಆದಾಯವನ್ನು ಮತ್ತು ಉಳಿತಾಯವನ್ನು ನಾನು ಹೊಂದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ವಾರ್ಷಿಕವಾಗಿ ನನ್ನ ಜಮೀನಿನಲ್ಲಿ ಎರಡು ಬೆಳೆ ಬೆಳೆಯುತ್ತೇನೆ. ನಾನು ವರ್ಷಕ್ಕೆ ಎರಡು ಬೆಳೆ ಬೆಳೆಯುತ್ತೇನೆ ಎಂದು ತೋರಿಸಲು ನನ್ನ ಬಳಿ ಯಾವುದೇ ದಾಖಲೆಗಳು ಇಲ್ಲ. ನನ್ನ ಖರ್ಚು ಕಳೆದು ವಾರ್ಷಿಕವಾಗಿ ನಾನು ಎರಡು ಫಸಲುಗಳಿಂದ ರೂ.6 ಲಕ್ಷ ದಷ್ಟು ಉಳಿತಾಯ ಮಾಡುತ್ತೇನೆ. ನಾನು ರೂ.6 ಲಕ್ಷದಷ್ಟ ಹಣವನ್ನು ಉಳಿತಾಯ ಮಾಡುತ್ತೇನೆ ಎಂದು ತೋರಿಸಲು ನಾನು ನನ್ನ ಬ್ಯಾಂಕ್ ಖಾತೆಯ ದಾಖಲೆಗಳು ಹಾಗೂ ಇನ್ನಿತರ ಹೂಡಿಕೆ ಮಾಡಿರುವ ದಾಖಲೆಗಳನ್ನು ನಾನು ಹಾಜರು ಪಡಿಸಿರುವುದಿಲ್ಲ. ನಾನು ಹೇಳುವಂತೆ 8 ಎಕರೆಯಷ್ಟು ಜಮೀನನ್ನು ನಾನು ಪ್ರತ್ಯೇಕವಾಗಿ ಹೊಂದಿರುವುದಿಲ್ಲ ಎಂದರೆ ಸರಿಯಲ್ಲ. ನಿ ಪಿ 9 ರಿಂದ 14 ರ ಆಸ್ತಿಗಳು ನಮ್ಮ ಒಟ್ಟು ಕುಟಂಬಕ್ಕೆ ಸೇರಿದ ಆಸ್ತಿಗಳಾಗಿದ್ದು ನಮ್ಮ ಕುಟುಂಬಕ್ಕೆ ಬೇರೆಆಸ್ತಿ ಇರುವುದಿಲ್ಲ ಎಂದರೆ ಸಾಕ್ಷಿಯು ನಮ್ಮ

ಕುಟುಂಬಕ್ಕೆ ಒಟ್ಟಾರೆ 35 ಎಕರೆ ಜಮೀನು ಇದ್ದು ಜೊತೆಗೆ ಖಾಲಿ ನಿವೇಶನಗಳನ್ನು ಹೊಂದಿರುತ್ತೇವೆ ಎಂದು ನುಡಿಯುತ್ತಾರೆ. ನಾನು ನನ್ನ ಜಮೀನಿನಲ್ಲಿ ಬರುವ ಆದಾಯದಿಂದ ನನ್ನ ಎಲ್ಲಾ ಖರ್ಚು ವೆಚ್ಚಗಳನ್ನು ಕಳೆದು ರೂ. 6 ಲಕ್ಷದಷ್ಟು ಉಳಿತಾಯ ಮಾಡುತ್ತಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಅದೇ ರೀತಿ ನಿ ಪಿ 15 ರಿಂದ 17ರ ದಾಖಲೆಗಳು 2015 ರಿಂದ 2017ರ ಸಾಲಿನದ್ದು ಇರುತ್ತವೆ ಎಂದರೆ ಸರಿ. ಸದರಿ ದಾಖಲೆಗಳು ನಾನು ಆರೋಪಿಗೆ ಸಾಲ ಕೊಟ್ಟಿರುತ್ತೇನೆ ಎನ್ನಲಾದ ದಿನಾಂಕಕ್ಕೆ ಸಂಬಂಧಪಟ್ಟಿರುವುದಿಲ್ಲ ಎಂದರೆ ಸರಿ. ನಾನು ಹಾಜರು ಪಡಿಸಿರುವ ಆದಾಯ ತೆರಿಗೆ ದಾಖಲೆಗಳಂತೆ 2015ರಲ್ಲಿ ನನ್ನ ಆದಾಯ ರೂ.2,75,000/-, 2016ರಲ್ಲಿ ನನ್ನ ಆದಾಯ ರೂ.3,69,307/- ಮತ್ತು 2015ರಲ್ಲಿ ನನ್ನ ಆದಾಯ ರೂ.3,40,000/- ಎಂದು ನಮೂದು ಇದೆ ಎಂದರೆ ಸರಿ. ಸಾಕ್ಷಿಯು ಮುಂದುವರಿದು ನಾನು ಪಿ ಡಬ್ಲೂ ಡಿ ಪ್ರಥಮ ದರ್ಜೆ ಗುತ್ತಿಗೆದಾರ ಪರವಾನಗಿ ಹೊಂದಿದ್ದು ಅದರಿಂದಲೂ ನನಗೆ ಆದಾಯ ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ಗುತ್ತಿಗೆಯಿಂದ ಬರುವ ಆದಾಯದ ಬಗ್ಗೆ ನಿ ಪಿ 15 ರಿಂದ 17ರಲ್ಲಿ ನಮೂದು ಇರುವುದಿಲ್ಲ ಎಂದರೆ ಸರಿ. ಸದರಿ ನಿ ಪಿ 15 ರಿಂದ 17ರ ದಾಖಲೆಗಳು ನಮ್ಮ ಹಿಂದೂ ಅವಿಭಕ್ತ ಕುಟುಂಬದ ಪರವಾಗಿ ನಮ್ಮ ಒಟ್ಟು ಕುಟುಂಬದ ಆದಾಯಕ್ಕೆ ಸಂಬಂಧಿಸಿದಂತೆ ಆದಾಯ ತೆರಿಗೆ ಪಾವತಿಸಿದ ದಾಖಲೆಗಳು ಇರುತ್ತವೆ ಎಂದರೆ ಸರಿಯಲ್ಲ. ನಿ ಪಿ 15 ರಿಂದ 17ರ ದಾಖಲೆಗಳಂತೆ ನಾನುಯಾವುದೇ ತೆರಿಗೆ ಪಾವತಿ ಮಾಡಿರುವುದಿಲ್ಲ ಮತ್ತು ಸಂಪೂರ್ಣ ತೆರಿಗೆ ವಿನಾಯಿತಿ ಪಡೆದುಕೊಂಡಿರುತ್ತೇನೆ ಎಂದರೆ ಸರಿ. ನಾನು ನಿ ಪಿ 15 ರಿಂದ 17ರಂತೆ ತೆರಿಗೆ ಪಾವತಿಯನ್ನು ಕೇವಲ ಬ್ಯಾಂಕಿನಿಂದ ಸಾಲ ಪಡೆಯಲು ಅರ್ಹತೆ ಹೊಂದಲು ಮಾತ್ರ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ನಿ ಪಿ 18 ರಿಂದ 20ರ ದಾಖಲೆಗಳಂತೆ ಯಾವುದೇ ವರ್ಷದಲ್ಲೂ ಕೂಡಾ ನಾನು ರೂ. 5 ಲಕ್ಷಕ್ಕಿಂತ ಹೆಚ್ಚು ಹಣಕಾಸಿನ ವ್ಯವಹಾರ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಈ ಪ್ರಕರಣದ ಆರೋಪಿಯಾದ ನಿಂಗಣ್ಣ ಬಿ ರಾಥೋಡ್ ಮತ್ತು ಸಿ ಸಿ ನಂಬರ್ 212/2022 ರ ಆರೋಪಿಯಾದ ಶಬರೀಶ ಸಿ ಪಿ ಮತ್ತು ಸಿ ಸಿ ನಂಬರ್ 213/2022ರ ಆರೋಪಿಯಾದ ಬಸಮ್ಮಣ್ಣಿಯವರಿಗೆ 2021 ನೇ ಸಾಲಿನಲ್ಲಿ ರೂ.12 ಲಕ್ಷದಷ್ಟು ಸಾಲ ಕೊಡುವ ಅರ್ಹತೆ ಹೊಂದಿರಲಿಲ್ಲ ಎಂದರೆ ಸರಿಯಲ್ಲ.

2021ರ ಸಾಲಿನಲ್ಲಿ ನನಗೆ ರೂ.12 ಲಕ್ಷ ಸಾಲ ಕೊಡುವಷ್ಟು ಅಂದರೆ ಎರಡು ಬಾರಿ ರೂ.5 ಲಕ್ಷ ಮತ್ತು ಒಂದು ಬಾರಿ 2 ಲಕ್ಷ ಹಣವನ್ನು ಸಾಲ ಕೊಡುವಷ್ಟು ಆರ್ಥಿಕ ಸಾಮರ್ಥ್ಯ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಹಾಗಿದ್ದರೂ ಕೂಡಾ ಆರೋಪಿಯ ವಿರುದ್ಧ ಸುಳ್ಳು ದೂರು ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿಯಾಗಿದೆ.

**(ಸಚಿನ್ ಹೆಚ್.ಆರ್)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ .ಎಂ .ಎಫ್ .ಸಿ ., ತಿ .ನರಸೀಪುರ**